# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಕೇಶವ ಪ್ರಸಾದ್. ಎಸ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 25 (272) |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 12-08-2025 |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ನೇಕಾರರ ಅಭಿವೃದ್ಧಿಗೆ ಸರ್ಕಾರ ರೂಪಿಸಿರುವ ಯೋಜನೆಗಳು ಯಾವುವು; ಯೋಜನೆಗಳ ಅನುಷ್ಠಾನಕ್ಕೆ ಕೈಗೊಂಡ ಕ್ರಮಗಳೇನು; ನೇಕಾರರ ಜಾಗೃತಿಗೆ ಹಮ್ಮಿಕೊಂಡ ಕಾರ್ಯ ಕ್ರಮಗಳೇನು; (ಸಂಪೂರ್ಣ ಮಾಹಿತಿ ನೀಡುವುದು) | ರಾಜ್ಯದ ನೇಕಾರರ ಅಭಿವೃದ್ಧಿಗೆ ಸರ್ಕಾರವು ಈ ಕೆಳಕಂಡ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಲಾಗುತ್ತಿದೆ.<br>ಕೈಮಗ್ಗ ಯೋಜನೆಗಳು:-<br>• ನೇಕಾರರ ಸಮ್ಮಾನ್ ಯೋಜನೆಯಡಿ ಕೈಮಗ್ಗ ನೇಕಾರರಿಗೆ ವಾರ್ಷಿಕ ರೂ.5,000/- ಗಳ ಆರ್ಥಿಕ ನೆರವು ನೀಡುವುದು.<br>• ಕೈಮಗ್ಗ ವಿಕಾಸ ಯೋಜನೆಯಡಿ ಹೊಸ ಕೈಮಗ್ಗ ಹಾಗೂ ಅಗತ್ಯ ಸಲಕರಣೆಗಳನ್ನು ಖರೀದಿಸಲು ಘಟಕ ವೆಚ್ಚದ ಶೇಕಡ 50 ರಷ್ಟು ಸಹಾಯಧನ ಒದಗಿಸುವುದು.<br>• ಕೈಮಗ್ಗಗಳಿಗೆ ಮೋಟರೈಸ್ಡ್ ಜಕಾರ್ಡ್ ಸಲಕರಣೆಗಳ ಕಿಟ್ ಒದಗಿಸಲು ಪ್ರತಿ ಘಟಕಕ್ಕೆ ವೆಚ್ಚವಾಗುವ ಮೊತ್ತಕ್ಕೆ ಸರ್ಕಾರದ ವತಿಯಿಂದ ಸಾಮಾನ್ಯ ವರ್ಗದವರಿಗೆ ಶೇ.50 ರಷ್ಟು ಸಹಾಯಧನ ಹಾಗೂ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಶೇ.90 ರಷ್ಟು ಸಹಾಯಧನವನ್ನು ಒದಗಿಸುವುದು.<br>• ನೇಕಾರರು ನೇಕಾರಿಕೆ ಉದ್ದೇಶಕ್ಕಾಗಿ ಸಹಕಾರ ಸಂಘ / ಸಹಕಾರ ಬ್ಯಾಂಕ್‌ಗಳಿಂದ ಪಡೆಯುವ ಸಾಲಕ್ಕೆ ಶೂನ್ಯ ಹಾಗೂ ಶೇ.1 ಬಡ್ಡಿ ದರದಲ್ಲಿ ರೂ.2.00 ಲಕ್ಷಗಳವರೆಗೆ, ಶೇ.3 ರ ಬಡ್ಡಿ ದರದಲ್ಲಿ ರೂ.2.00 ಲಕ್ಷಗಳಿಂದ ರೂ.5.00 ಲಕ್ಷಗಳವರೆಗೆ ಸಾಲ ನೀಡಲಾಗುವುದು.<br>• ನೇಕಾರರು ನೇಕಾರಿಕೆ ಉದ್ದೇಶಕ್ಕಾಗಿ ಸಹಕಾರ ಸಂಘ / ಸಹಕಾರ ಬ್ಯಾಂಕ್ / ವಾಣಿಜ್ಯ ಬ್ಯಾಂಕ್‌ಗಳಿಂದ ಪಡೆಯುವ ಸಾಲಕ್ಕೆ ಶೇ.8 ರಷ್ಟು ಬಡ್ಡಿ ಸಹಾಯಧನ ನೀಡಲಾಗುವುದು.<br>• ಕೈಮಗ್ಗ ನೇಕಾರರ ಸಹಕಾರ ಸಂಘಗಳು ತಮ್ಮ ಕೈಮಗ್ಗ ಉತ್ಪನ್ನಗಳ ಮಾರಾಟ ಮೇಲೆ ರಾಜ್ಯ ಸರ್ಕಾರದಿಂದ ಶೇ.20 ರಿಬೇಟ್ ಅನ್ನು ಮರು ಸಂದಾಯ ಪಾವತಿಸಲಾಗುತ್ತಿದೆ.<br>• ಕಚ್ಚಾಮಾಲು ಖರೀದಿ ಮೇಲೆ ಕೈಮಗ್ಗ ಸಹಕಾರ ಸಂಘಗಳಿಗೆ ಪ್ರತಿ ಕೆ.ಜಿ ಗೆ ರೂ.15/- ರ ಸಹಾಯಧನ ನೀಡುವುದು.<br>• ಮಿತವ್ಯಯ ನಿಧಿ ಯೋಜನೆಯಡಿ ನೇಕಾರರ ಮಜೂರಿಯಿಂದ ಶೇ.8 ನ್ನು ಕಟಾಯಿಸಿ ರಾಜ್ಯ ಸರ್ಕಾರದ ಶೇ.8 ರ ಸಮಚಂದಾ ಸೇರಿಸಿ ಖಜಾನೆಯಲ್ಲಿ ಜಮಾ ಮಾಡಲಾಗುವುದು ಜಮೆಯಾದ ಮೊತ್ತಕ್ಕೆ ಶೇ.12 ರ ಬಡ್ಡಿಯನ್ನು ನೀಡಲಾಗುವುದು.<br>• ಸಾಮಾನ್ಯ ಸೌಲಭ್ಯ ಕೇಂದ್ರ ನಿರ್ಮಾಣಕ್ಕಾಗಿ ಸರ್ಕಾರದಿಂದ ಯೋಜನಾ ವೆಚ್ಚದ ಶೇ.80 ರಷ್ಟು ಅನುದಾನ ನೀಡಲಾಗುವುದು. |

...2

- ಕೈಮಗ್ಗ ನೇಕಾರರ ಸಹಕಾರ ಸಂಘಗಳಿಗೆ ಹಿಂದಿನ 3 ವರ್ಷಗಳ ಸರಾಸರಿ ವಹಿವಾಟಿನ ಮೇಲೆ ಶೇ.50 ರಷ್ಟನ್ನು ಅಥವಾ ರೂ.5.00 ಲಕ್ಷಗಳ ಗರಿಷ್ಠ ಮಿತಿಗೆ ಒಳಪಟ್ಟು ಒಂದಾವರ್ತಿ ಪ್ರೋತ್ಸಾಹಧನ ನೀಡಲಾಗುವುದು.
- ಉಣ್ಣೆ ವಲಯ ಪುನಃಶ್ಚೇತನ ಮತ್ತು ಬಲವರ್ಧನೆ ಯೋಜನೆಯಡಿ ಸಹಾಯಧನ
- ರಾಜ್ಯದ ಕೈಮಗ್ಗ ನೇಕಾರರ ಕೈಮಗ್ಗ ಉತ್ಪನ್ನಗಳನ್ನು ಪ್ರೋತ್ಸಾಹಿಸಲು ಹಾಗೂ ಬೆಂಬಲ ನೀಡಲು ರೇಷ್ಮೆ, ಹತ್ತಿ ಮತ್ತು ಉಣ್ಣೆ ಕ್ಷೇತ್ರ / ವಲಯದಲ್ಲಿ ಕೈಮಗ್ಗ ನೇಕಾರರು ಹೊಂದಿರುವ ನೈಪುಣ್ಯತೆ / ಶ್ರೇಷ್ಠತೆ / ತಾಂತ್ರಿಕತೆ / ಉತ್ಕೃಷ್ಟತೆಗಾಗಿ ಕೈಮಗ್ಗ ನೇಕಾರರಿಗೆ ರಾಜ್ಯ ಮಟ್ಟದ ಪ್ರಶಸ್ತಿ ನೀಡಲಾಗುತ್ತಿದೆ.
- ಕೇಂದ್ರ ಪುರಸ್ಕೃತ ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ಕಾರ್ಯಕ್ರಮ (NHDP) ದಡಿ ಕೈಮಗ್ಗ ನೇಕಾರರಿಗೆ ಮುದ್ರಾ ಯೋಜನೆಯಡಿ ಸಾಲ ಸೌಲಭ್ಯ.
- ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಡಿ ನೋಂದಾಯಿತ ನೇಕಾರರಿಗೆ ಕಚ್ಚಾ ನೂಲನ್ನು ಒದಗಿಸಿ ಅವರು ಉತ್ಪಾದಿಸಿದ ಬಟ್ಟೆಗಳನ್ನು ಸ್ವೀಕರಿಸಿ ಪರಿವರ್ತನಾ ಶುಲ್ಕವನ್ನು ಒದಗಿಸಲಾಗುತ್ತಿದೆ.

**ವಿದ್ಯುತ್ ಮಗ್ಗ ಯೋಜನೆಗಳು:-**

- ನೇಕಾರರ ಸಮ್ಮಾನ್ ಯೋಜನೆಯಡಿ ವಿದ್ಯುತ್‌ಮಗ್ಗ ನೇಕಾರರಿಗೆ ವಾರ್ಷಿಕ ರೂ.5,000/- ಗಳ ಆರ್ಥಿಕ ನೆರವು ನೀಡುವುದು.
- ನೇಕಾರರ ಮಕ್ಕಳಿಗೆ ವಿದ್ಯಾರ್ಥಿ ವೇತನ
- 02 ವಿದ್ಯುತ್ ಮಗ್ಗ ಖರೀದಿಗೆ ಸಹಾಯಧನ.
- ಎಲೆಕ್ಟ್ರಾನಿಕ್ ಜಕಾರ್ಡ್ ಖರೀದಿಗೆ ಸಹಾಯಧನ.
- ವಿದ್ಯುತ್ ರಿಯಾಯಿತಿ ಸಹಾಯಧನ – 01 ರಿಂದ 10 ಹೆಚ್.ಪಿ ವಿದ್ಯುತ್ ಸಂಪರ್ಕ ಪಡೆದ ವಿದ್ಯುತ್ ಮಗ್ಗ ಹಾಗೂ ಮಗ್ಗ ಪೂರ್ವ ಘಟಕಗಳಿಗೆ ಉಚಿತವಾಗಿ ವಿದ್ಯುತ್ ಪೂರೈಸಿ ಶೂನ್ಯ ಬಿಲ್ ನೀಡಲಾಗುತ್ತಿದೆ ಹಾಗೂ 10.01 ರಿಂದ 20 ಹೆಚ್.ಪಿ ವಿದ್ಯುತ್ ಸಂಪರ್ಕ ಪಡೆದ ವಿದ್ಯುತ್ ಮಗ್ಗ ಹಾಗೂ ಮಗ್ಗ ಪೂರ್ವ ಘಟಕಗಳಿಗೆ ಬಳಸಿದ ಒಟ್ಟು ಯೂನಿಟ್‌ಗಳಿಗೆ ಪ್ರತಿ ಯೂನಿಟ್‌ಗೆ ರೂ.1.25 ರಂತೆ ವಿದ್ಯುತ್ ಶುಲ್ಕವನ್ನು (Energy Charges) ಘಟಕದವರು ಪಾವತಿಸುವುದು. ಬಾಕಿ ಉಳಿಯುವ ವಿದ್ಯುತ್ ಶುಲ್ಕದ ಮೊತ್ತವನ್ನು ಮಾತ್ರ ಸರ್ಕಾರದ ಬೊಕ್ಕಸದಿಂದ ಭರಿಸಲಾಗುತ್ತಿದೆ.
- ಸೈಜಿಂಗ್ ಘಟಕ ಸ್ಥಾಪನೆಗೆ ಸಹಾಯಧನ.
- ಮಿನಿ ಪವರ್‌ಲೂಮ್ ಪಾರ್ಕ್ ಸ್ಥಾಪನೆಗೆ ಸಹಾಯಧನ.
- ಪ್ರೊಸೆಸ್ಸಿಂಗ್ ಘಟಕ ಸ್ಥಾಪನೆಗೆ ಸಹಾಯಧನ.
- 20 ಹೆಚ್.ಪಿ ಇಂದ 200 ಹೆಚ್.ಪಿ ವರೆಗಿನ ವಿದ್ಯುತ್ ಸಂಪರ್ಕ ಹೊಂದಿರುವ SCSP /TSP ವಿದ್ಯುತ್ ಮಗ್ಗ ಘಟಕಗಳಿಗೆ Energy Charges ನಲ್ಲಿ ಶೇ.50 ರಷ್ಟು ವಿದ್ಯುತ್ ಸಹಾಯಧನ ಒದಗಿಸಲಾಗುವುದು.
- ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ರಡಿ ಜವಳಿ ಕ್ಷೇತ್ರಕ್ಕೆ ಸಂಬಂಧಿಸಿದ ಸಣ್ಣ ಮತ್ತು ಅತಿ ಸಣ್ಣ (ಎಸ್.ಎಂ.ಇ) ಘಟಕಗಳ ಸ್ಥಾಪನೆಗೆ ಸಹಾಯಧನ.

...3

| | | |
|---|---|---|
| ಆ) | ನೇಕಾರರ ಉತ್ಪನ್ನಗಳಿಗೆ ಮಾರುಕಟ್ಟೆ ಸೃಷ್ಟಿ ಆಗಿದೆಯೇ; ಹಾಗಿದ್ದರೆ ಯಾವ ರೀತಿಯಾಗಿ ಮತ್ತು ಎಷ್ಟು ಮೊತ್ತದ್ದು; ರಾಜ್ಯದಲ್ಲಿರುವ ಜವಳಿ ಪಾರ್ಕ್‌ಗಳ ಸಂಖ್ಯೆ ಎಷ್ಟು; ಸದರಿ ಪಾರ್ಕ್‌ಗಳ ಸ್ಥಿತಿ-ಗತಿ ಹಾಗೂ ಜವಳಿ ಪಾರ್ಕ್‌ಗಳಿಂದ ಆಗಿರುವ ಲಾಭ ಎಷ್ಟು; (ಸಂಪೂರ್ಣ ಮಾಹಿತಿ ನೀಡುವುದು) | ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಡಿ ನೇಕಾರರು ಉತ್ಪಾದಿಸಿದ ಉತ್ಪನ್ನಗಳನ್ನು ನೇರವಾಗಿ ಸ್ವೀಕರಿಸಿ ರಾಜ್ಯ ವಿವಿದ ಜಿಲ್ಲೆಗಳಲ್ಲಿರುವ ಪ್ರಿಯದರ್ಶಿನಿ ಮಾರಾಟ ಮಳಿಗೆಗಳಲ್ಲಿ ಮಾರಾಟ ಮಾಡಲಾಗುತ್ತಿದೆ. 2024-25 ನೇ ಸಾಲಿಗೆ ನಿಗಮದ ನೇಕಾರರಿಂದ ಉತ್ಪಾದಿಸಲಾದ ರೂ.21.58 ಕೋಟಿ ಮೊತ್ತದ ಕೈಮಗ್ಗ ಉತ್ಪನ್ನಗಳನ್ನು ಮಾರಾಟ ಮಾಡಲಾಗಿರುತ್ತದೆ.<br><br>ಕರ್ನಾಟಕ ರಾಜ್ಯ ಸಹಕಾರ ಕೈಮಗ್ಗ ನೇಕಾರರ ಮಹಾಮಂಡಳಿ ನಿಯಮಿತ (ಕಾವೇರಿ ಹ್ಯಾಂಡ್‌ಲೂಮ್ಸ್)ದಡಿ ಕೈಮಗ್ಗ ನೇಕಾರರ ಸಹಕಾರ ಸಂಘಗಳು ಉತ್ಪಾದಿಸಿದ ಉತ್ಪನ್ನಗಳನ್ನು ನೇರವಾಗಿ ಸ್ವೀಕರಿಸಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿರುವ ಮಾರಾಟ ಮಳಿಗೆಗಳಲ್ಲಿ ಮಾರಾಟ ಮಾಡಲಾಗುತ್ತಿದೆ. 2024-25ನೇ ಸಾಲಿಗೆ ಕೈಮಗ್ಗ ನೇಕಾರರ ಮಹಾಮಂಡಳದಿಂದ ಉತ್ಪಾದಿಸಲಾದ ರೂ.25.06 ಲಕ್ಷಗಳ ಮೊತ್ತದ ಕೈಮಗ್ಗ ಉತ್ಪನ್ನಗಳನ್ನು ಮಾರಾಟ ಮಾಡಲಾಗಿರುತ್ತದೆ.<br>ರಾಜ್ಯದಲ್ಲಿ ಒಟ್ಟು 16 ಜವಳಿ ಪಾರ್ಕ್‌ಗಳಿವೆ. ಇವುಗಳಲ್ಲಿ, ಸರ್ಕಾರದ ನಿಗಮ/ಮಂಡಲಿ ಹಾಗೂ ಖಾಸಗಿ ಒಡೆತನದಲ್ಲಿ 08 ಜವಳಿ ಪಾರ್ಕ್‌ಗಳಿದ್ದು, ಇದರಲ್ಲಿ 06 ಜವಳಿ ಪಾರ್ಕ್‌ಗಳು ಕಾರ್ಯ ನಿರ್ವಹಿಸುತ್ತಿವೆ ಹಾಗೂ 02 ಜವಳಿ ಪಾರ್ಕ್ ಪ್ರಗತಿಯಲ್ಲಿದೆ ಮತ್ತು ಇಲಾಖೆಯ ಒಡೆತನದಲ್ಲಿ 01 ಜವಳಿ ಪಾರ್ಕ್‌ನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ. ವಿವರಗಳನ್ನು ಅನುಬಂಧ-1A ರಲ್ಲಿ ಒದಗಿಸಿದೆ.<br><br>ಹಾಗೂ<br>ಇಲಾಖೆಯ ಹೆಸರಿನಲ್ಲಿರುವ ಜಮೀನುಗಳಲ್ಲಿ ಸಾರ್ವಜನಿಕ-ಖಾಸಗಿ ಸಹಭಾಗಿತ್ವದ (ಪಿ.ಪಿ.ಪಿ) ಮಾದರಿಯಲ್ಲಿ ಒಟ್ಟು 07 ಜವಳಿ ಪಾರ್ಕ್‌ಗಳನ್ನು ಸ್ಥಾಪಿಸಲಾಗುತ್ತಿದ್ದು, ಪ್ರಗತಿಯ ವಿವಿಧ ಹಂತಗಳಲ್ಲಿದ್ದು, ವಿವರಗಳನ್ನು ಅನುಬಂಧ-**1B** ರಲ್ಲಿ ಒದಗಿಸಿದೆ. |
| ಇ) | ಕೈಮಗ್ಗ ನೇಕಾರರ ಉತ್ಪನ್ನ ಮಾರಾಟಕ್ಕೆ ಸರ್ಕಾರದ ವಿಶೇಷ ಪ್ರಯತ್ನ ಏನು; ಕೈಮಗ್ಗ ನೇಕಾರರ ಆರ್ಥಿಕ ಸ್ಥಿತಿ ಉತ್ತಮಗೊಂಡಿದೆಯೇ; | ಕೈಮಗ್ಗ ನೇಕಾರರ ಉತ್ಪನ್ನ ಮಾರಾಟಕ್ಕೆ ಸರ್ಕಾರದ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br>• ರಾಜ್ಯ ಸರ್ಕಾರದ ವತಿಯಿಂದ ಕೈಮಗ್ಗ ನೇಕಾರರ ಸಹಕಾರ ಸಂಘಗಳು ಹಾಗೂ ಕೈಮಗ್ಗ ಮಹಾಮಂಡಳಗಳು / ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಲ್ಲಿ ತಯಾರಿಸಲಾದ ಕೈಮಗ್ಗ ಉತ್ಪನ್ನಗಳಿಗೆ ವರ್ಷದಲ್ಲಿ 365 ದಿನಗಳ ಅವಧಿಗೆ ಮಾರಾಟ ಮಾಡಿದ ಕೈಮಗ್ಗ ಉತ್ಪನ್ನಗಳ ಮೌಲ್ಯದ ಮೇಲೆ ಶೇಕಡ 20 ರಿಬೇಟ್ ಮಾರುಕಟ್ಟೆ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ.<br>• ಕೇಂದ್ರ ಸರ್ಕಾರದ ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ಕಾರ್ಯಕ್ರಮ (NHDP) ದಡಿ ರಾಷ್ಟ್ರೀಯ ಕೈಮಗ್ಗ ಮೇಳ (NHE), ರಾಜ್ಯ ಮಟ್ಟದ ಕೈಮಗ್ಗ ಮೇಳ (SHE) ಹಾಗೂ ಜಿಲ್ಲಾ ಮಟ್ಟದ ಕೈಮಗ್ಗ ಮೇಳ (DLE) ಗಳನ್ನು ಆಯೋಜಿಸಲಾಗುತ್ತಿದೆ.<br>• ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಕೈಮಗ್ಗ ನೇಕಾರರ ಉತ್ಪನ್ನ ಮಾರಾಟಕ್ಕೆ ಈಗಾಗಲೇ ರಾಜ್ಯದಲ್ಲಿರುವ ಪ್ರಿಯದರ್ಶಿನಿ ಮಾರಾಟ ಮಳಿಗೆಗಳಲ್ಲಿ ಮಾರಾಟ ಮಾಡಲಾಗುತ್ತಿದ್ದು, ಇತ್ತೀಚೆಗೆ ಆನ್ ಲೈನ್ ಮಾರಾಟ ವ್ಯವಸ್ಥೆಯನ್ನು ಕೂಡ ಮಾಡಲಾಗುತ್ತಿದೆ.<br>ಈ ಮೇಲಿನ ಯೋಜನೆಗಳಿಂದ ಕೈಮಗ್ಗ ನೇಕಾರರು ತಾವು ಉತ್ಪಾದಿಸಿದ ಉತ್ಪನ್ನಗಳಿಗೆ ಮಾರುಕಟ್ಟೆ ಸೌಲಭ್ಯ ದೊರಕಿಸಿಕೊಡಲು ಕ್ರಮವಹಿಸಲಾಗಿದೆ. |

...4

| | | |
|---|---|---|
| ಈ) | ಕೈಮಗ್ಗ ನೇಕಾರರಿಗೆ ಮತ್ತು ವಿದ್ಯುತ್ ನೇಕಾರರಿಗೆ ಆಗಿರುವ ಲಾಭವೇನು: ನೇಕಾರರ ಸ್ಥಿತಿ ಉತ್ತಮಗೊಂಡಿರುವ ಬಗ್ಗೆ ಅವರ ಉತ್ಪನ್ನಗಳಿಗೆ ಉತ್ತಮ ಬೆಲೆ ದೊರಕಿರುವ ಬಗ್ಗೆ ಜಾಹೀರಾತು ಬಂದಿಲ್ಲದಿರುವುದಕ್ಕೆ ಕಾರಣವೇನು; | ಕೈಮಗ್ಗ ಮತ್ತು ವಿದ್ಯುತ್ ಮಗ್ಗ ನೇಕಾರರ ಉದ್ದಿಮೆಯನ್ನು ಪ್ರೋತ್ಸಾಹಿಸಲು ಮತ್ತು ನೇಕಾರರ ನಿರಂತರ ಉದ್ಯೋಗ ಸೃಜನೆಗೆ ಹಾಗೂ ಸಾಮಾಜಿಕ / ಆರ್ಥಿಕವಾಗಿ ಮೇಲೆತ್ತಲು ಇಲಾಖೆಯಿಂದ ಈ ಕೆಳಕಂಡ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>**ಕೈಮಗ್ಗ ನೇಕಾರರಿಗೆ :-**<br>• ಕೈಮಗ್ಗ ನೇಕಾರರು ಉತ್ಪಾದಿಸುವ ಉತ್ಪನ್ನಗಳಿಗೆ ರಾಜ್ಯ ಸರ್ಕಾರದ ವತಿಯಿಂದ ಕೈಮಗ್ಗ ನೇಕಾರರ ಸಹಕಾರ ಸಂಘಗಳು ಹಾಗೂ ಕೈಮಗ್ಗ ಮಹಾಮಂಡಳಗಳು / ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಲ್ಲಿ ತಯಾರಿಸಲಾದ ಕೈಮಗ್ಗ ಉತ್ಪನ್ನಗಳಿಗೆ ವರ್ಷದಲ್ಲಿ 365 ದಿನಗಳ ಅವಧಿಗೆ ಮಾರಾಟ ಮಾಡಿದ ಕೈಮಗ್ಗ ಉತ್ಪನ್ನಗಳ ಮೌಲ್ಯದ ಮೇಲೆ ಶೇಕಡ 20 ರಿಬೇಟ್ ಮಾರುಕಟ್ಟೆ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ.<br>• ಇದರಿಂದಾಗಿ 82 ಕೈಮಗ್ಗ ನೇಕಾರರ ಸಹಕಾರ ಸಂಘ / ಮಹಾಮಂಡಳಿಗೆ ಒಟ್ಟು ರೂ.504.30 ಲಕ್ಷಗಳ ಶೇ.20 ರಿಬೇಟ್ ಅನ್ನು ಮರುಸಂದಾಯ ಮಾಡಲಾಗಿದೆ.<br>• ಕಚ್ಚಾಮಾಲು ಖರೀದಿ ಮೇಲೆ ಕೈಮಗ್ಗ ಸಹಕಾರ ಸಂಘಗಳಿಗೆ ಪ್ರತಿ ಕೆ.ಜಿ ಗೆ ರೂ.15/- ರ ಸಹಾಯಧನ ನೀಡಲಾಗುತ್ತಿದೆ.<br>• ಇದರಿಂದಾಗಿ 20 ಕೈಮಗ್ಗ ನೇಕಾರರ ಸಹಕಾರ ಸಂಘಗಳಿಗೆ ಒಟ್ಟು ರೂ.2.62 ಲಕ್ಷಗಳ ಸಹಾಯಧನ ಬಿಡುಗಡೆ ಮಾಡಲಾಗಿದೆ.<br><br>**ವಿದ್ಯುತ್‌ಮಗ್ಗ ನೇಕಾರರಿಗೆ :-**<br>• ರಾಜ್ಯದ ಶೇ.80 ರಷ್ಟು ಸಣ್ಣ ಪ್ರಮಾಣದ ನೇಕಾರರಿಗೆ ಅನುಕೂಲವಾಗುವುದರಿಂದ "10 ಹೆಚ್.ಪಿ ವರೆಗೆ ವಿದ್ಯುತ್ ಸಂಪರ್ಕ ಹೊಂದಿರುವ / ಪಡೆದ ವಿದ್ಯುತ್ ಮಗ್ಗ ಹಾಗೂ ಮಗ್ಗ ಪೂರ್ವ ಘಟಕಗಳಿಗೆ Energy Charges + Fixed Charges(FC) + Fuel adjustment charges(FAC) + Tax ಸೇರಿದಂತೆ ಸಂಪೂರ್ಣ ಬಿಲ್ ಮೊತ್ತವನ್ನು ಸರ್ಕಾರದಿಂದ ಭರಿಸಿ "ಶೂನ್ಯ ಬಿಲ್" ನೀಡಲಾಗುತ್ತಿದೆ.<br>• "10.1 ಹೆಚ್.ಪಿ ಯಿಂದ 20 ಹೆಚ್.ಪಿ ವರೆಗೆ ವಿದ್ಯುತ್ ಸಂಪರ್ಕ ಹೊಂದಿರುವ / ಪಡೆದ ವಿದ್ಯುತ್ ಮಗ್ಗ ಹಾಗೂ ಮಗ್ಗ ಪೂರ್ವ ಘಟಕಗಳಿಗೆ ಬಳಸಿದ ಒಟ್ಟು ಯೂನಿಟ್‌ಗಳಿಗೆ ಪ್ರತಿ ಯೂನಿಟ್‌ಗೆ ರೂ.1.25 ರಂತೆ ವಿದ್ಯುತ್ ಶುಲ್ಕವನ್ನು (Energy Charges) ಘಟಕದವರು ಪಾವತಿಸುವುದು. ಬಾಕಿ ಉಳಿಯುವ ವಿದ್ಯುತ್ ಶುಲ್ಕದ ಮೊತ್ತವನ್ನು ಮಾತ್ರ ಸರ್ಕಾರದ ಬೊಕ್ಕಸದಿಂದ ಭರಿಸುವುದು. ಉಳಿದಂತೆ, ನಿಗದಿತ ಶುಲ್ಕ (Fixed Charges), ಇಂಧನ ಹೊಂದಾಣಿಕಾ ಶುಲ್ಕ (Fuel adjustment charges), ವಿದ್ಯುತ್ ತೆರಿಗೆ (Tax) ಮೊತ್ತಗಳನ್ನು ನೇಕಾರರು / ಘಟಕದವರಿಂದ ಭರಿಸಲಾಗುತ್ತಿದೆ.<br>• ಇದರಿಂದಾಗಿ ರಾಜ್ಯದಲ್ಲಿನ 01 ರಿಂದ 10 ಹೆಚ್.ಪಿ ವರೆಗಿನ ಸುಮಾರು 29288 ಘಟಕಗಳು ಹಾಗೂ 10ಕ್ಕಿಂತ ಹೆಚ್ಚು ಮತ್ತು 20 ಹೆಚ್.ಪಿ ವರೆಗಿನ ಸುಮಾರು 2067 ವಿದ್ಯುತ್ ಮಗ್ಗ ಹಾಗೂ ಮಗ್ಗ ಪೂರ್ವ ಘಟಕಗಳು ಪ್ರಯೋಜನ ಪಡೆಯುತ್ತಿರುತ್ತಾರೆ. |

| | | |
|---|---|---|
| ಉ) | ಕೈಮಗ್ಗ ನೇಕಾರರ ಉತ್ಪನ್ನಗಳಿಗೆ ಬೆಂಗಳೂರು ಮಹಾನಗರವನ್ನು ಒಳಗೊಂಡಂತೆ ರಾಜ್ಯ ಇನ್ನಿತರೆ ಯಾವ ನಗರಗಳಲ್ಲಿ ಮಾರಾಟ ಸೌಲಭ್ಯವನ್ನು ಕಲ್ಪಿಸಲಾಗಿದೆ; ಈ ಮಾರಾಟ ಸ್ಥಳಗಳಲ್ಲಿ ಮಾರಾಟವಾಗಿರುವ ಉತ್ಪನ್ನದ ಒಟ್ಟು ಮೊತ್ತ ಎಷ್ಟು; ಎಷ್ಟು ಕೈಮಗ್ಗ ನೇಕಾರರಿಗೆ ಇದರಿಂದ ನೇರವಾಗಿ ಲಾಭವಾಗಿದೆ? | • ಕೈಮಗ್ಗ ನೇಕಾರರ ಉತ್ಪನ್ನಗಳಿಗೆ ಬೆಂಗಳೂರು ಮಹಾನಗರವನ್ನು ಒಳಗೊಂಡಂತೆ ರಾಜ್ಯ ಇನ್ನಿತರೆ ಜಿಲ್ಲೆಗಳಾದ ದಾವಣಗೆರೆ, ಮೈಸೂರು, ಧಾರವಾಡ, ಚಿಕ್ಕಮಗಳೂರು, ಹಾಸನ, ಬಳ್ಳಾರಿ ನಗರಗಳಲ್ಲಿ ರಾಷ್ಟ್ರೀಯ ಕೈಮಗ್ಗ ಮೇಳ (NHE), ರಾಜ್ಯ ಮಟ್ಟದ ಕೈಮಗ್ಗ ಮೇಳ (SHE) ಹಾಗೂ ಜಿಲ್ಲಾ ಮಟ್ಟದ ಕೈಮಗ್ಗ ಮೇಳ (DLE)ಗಳನ್ನು ಆಯೋಜಿಸಿ ಮಾರಾಟ ಸೌಲಭ್ಯವನ್ನು ಕಲ್ಪಿಸಲಾಗಿದೆ. ವಿವರಗಳನ್ನು ಅನುಬಂಧ-2 ರಲ್ಲಿ ಒದಗಿಸಿದೆ.<br>• ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಡಿಯಲ್ಲಿ ಪ್ರಸ್ತುತ ಬೆಂಗಳೂರಿನಲ್ಲಿ-03, ಮೈಸೂರಿನಲ್ಲಿ-02, ಹುಬ್ಬಳ್ಳಿ-01, ಉಡುಪಿ-01 ಹಾಗೂ ತುಮಕೂರಿನಲ್ಲಿ-01 ಒಟ್ಟು 08 ಪ್ರಿಯದರ್ಶಿನಿ ಮಾರಾಟ ಮಳಿಗೆಗಳು ಕಾರ್ಯನಿರ್ವಹಿಸುತ್ತಿದ್ದು, ಸದರಿ ಮಾರಾಟ ಮಳಿಗೆಗಳ ಮುಖಾಂತರ ನಿಗಮದ ನೇಕಾರರು ಉತ್ಪಾದಿಸಿದ ಬಟ್ಟೆಗಳನ್ನು ಮಾರಾಟ ಮಾಡಲಾಗುತ್ತಿದೆ. ಸದರಿ ಮಳಿಗೆಗಳ ಮುಖಾಂತರ 2024-25ನೇ ಸಾಲಿನಲ್ಲಿ ರೂ.4.54 ಕೋಟಿ ಮೊತ್ತದ ಹಾಗೂ 2025-26ನೇ ಸಾಲಿನಲ್ಲಿ ಜುಲೈ ಅಂತ್ಯಕ್ಕೆ ರೂ.1.43 ಕೋಟಿ ಮೊತ್ತದ ಮಾರಾಟ ವಹಿವಾಟು ಮಾಡಲಾಗಿದೆ. ಅಲ್ಲದೇ, 2024-25 ನೇ ಶೈಕ್ಷಣಿಕ ವರ್ಷಕ್ಕೆ ರೂ.17.04 ಕೋಟಿ ಮೊತ್ತದ ಸಮವಸ್ತ್ರಗಳನ್ನು ಶಿಕ್ಷಣ ಇಲಾಖೆಗೆ ಪೂರೈಸಲಾಗಿದೆ. ಇದರಿಂದ 3435 ಕೈಮಗ್ಗ ನೇಕಾರರಿಗೆ ನೇರವಾಗಿ ಲಾಭವಾಗಿದೆ.<br>• ಕಾವೇರಿ ಹ್ಯಾಂಡ್‌ಲೂಮ್ಸ್‌ನ ಒಟ್ಟು 04 ಮಳಿಗೆಗಳು (ಬೆಂಗಳೂರು-02, ಮಂಡ್ಯ-01, ಚಿಕ್ಕಮಗಳೂರು-01) ಕಾರ್ಯನಿರ್ವಹಿಸುತ್ತಿದ್ದು, ಇದರ ಮೂಲಕ 2024-25ನೇ ಸಾಲಿಗೆ ಒಟ್ಟು ರೂ.25.06 ಲಕ್ಷಗಳ ಕೈಮಗ್ಗ ಉತ್ಪನ್ನಗಳ ಮಾರಾಟವನ್ನು ಮಾಡಲಾಗಿರುತ್ತದೆ. |

**ಸಂಖ್ಯೆ: CI 173 JAKE 2025**

(ಶಿವಾನಂದ ಎಸ್. ಪಾಟೀಲ)
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು

## ಅನುಬಂಧ-1 A

### ಇಲಾಖೆ/ ನಿಗಮ/ ಮಂಡಳಿ/ ಖಾಸಗಿ ವಲಯದಲ್ಲಿ ಸ್ಥಾಪಿಸಿರುವ ಜವಳಿ ಪಾರ್ಕ್‌ಗಳ ವಿವರ

(ರೂ. ಕೋಟಿಗಳಲ್ಲಿ)

| ಕ್ರ. ಸಂ. | ಪಾರ್ಕ್ ಹೆಸರು | ಪಾರ್ಕ್ ಮಾದರಿ | ವಿಸ್ತೀರ್ಣ (ಎಕರೆಗಳಲ್ಲಿ) | ಕಾರ್ಯನಿರ್ವಹಿಸುತ್ತಿರುವ ಘಟಕಗಳ ಸಂಖ್ಯೆ | ಬಂಡವಾಳ ಹೂಡಿಕೆ | ಉದ್ಯೋಗ ಸೃಷ್ಟಿ | ಚಟುವಟಿಕೆಗಳು | ಸ್ಥಿತಿಗತಿ |
|---|---|---|---|---|---|---|---|---|
| 1. | ಶಿಗ್ಗಾಂವಿ ಜವಳಿ ಪಾರ್ಕ್, ಶಿಗ್ಗಾಂವಿ, ಹಾವೇರಿ ಜಿಲ್ಲೆ | ರಾಜ್ಯ ಸರ್ಕಾರ ಒಡೆತನದ ಆಂಕರ್ ಮಾದರಿ-ಪಾರ್ಕ್ | 58.31 | 01 | 84.00 | 1300 | ಸಿದ್ಧ ಉಡುಪು ಮತ್ತು ತಾಂತ್ರಿಕ ಜವಳಿ | ಪ್ರಗತಿಯಲ್ಲಿದೆ. |
| 2. | ದೊಡ್ಡಬಳ್ಳಾಪುರ ಇಂಟಿಗ್ರೇಟೆಡ್ ಟೆಕ್ಸ್‌ಟೈಲ್ ಪಾರ್ಕ್ – ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ | ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆ ಅನುಮೋದಿತ SITP (Scheme for Integrated Textile Park) | 46.58 | 12 | 37.00 | 200 | ವೀವಿಂಗ್, ಸೈಜಿಂಗ್, ವಾರ್ಪಿಂಗ್ & ಗಾರ್ಮೆಂಟಿಂಗ್, ಡೈಯಿಂಗ್ & ಪ್ರಿಂಟಿಂಗ್ | ಕಾರ್ಯ ನಿರ್ವಹಿಸುತ್ತಿದೆ. |
| 3. | ದೊಡ್ಡಬಳ್ಳಾಪುರ ಅಪೆರೆಲ್ ಪಾರ್ಕ್ – ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ | ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆ ಅನುಮೋದಿತ SITP (Scheme for Integrated Textile Park) | 452 | 13 | 406.24 | 5655 | ಸಿದ್ಧ ಉಡುಪು ಮತ್ತು ವೀವಿಂಗ್ | ಕಾರ್ಯ ನಿರ್ವಹಿಸುತ್ತಿದೆ. |
| 4. | ಬ್ಯೆನರಿ ಅಪೆರೆಲ್ ಪಾರ್ಕ್ ಪ್ರೈ ಲಿ., ಚಿತ್ರದುರ್ಗ ಜಿಲ್ಲೆ | ರಾಜ್ಯ ಸರ್ಕಾರದ ಅನುಮೋದಿತ ನೂತನ ಜವಳಿ ನೀತಿ 2013-18 | 25.17 | 03 | 98.00 | 2810 | ಸಿದ್ಧ ಉಡುಪು | ಕಾರ್ಯ ನಿರ್ವಹಿಸುತ್ತಿದೆ. |

| ಕ್ರ. ಸಂ. | ಪಾರ್ಕ್ ಹೆಸರು | ಪಾರ್ಕ್ ಮಾದರಿ | ವಿಸ್ತೀರ್ಣ (ಎಕರೆಗಳಲ್ಲಿ) | ಕಾರ್ಯನಿರ್ವಹಿಸುತ್ತಿರುವ ಘಟಕಗಳ ಸಂಖ್ಯೆ | ಬಂಡವಾಳ ಹೂಡಿಕೆ | ಉದ್ಯೋಗ ಸೃಷ್ಟಿ | ಚಟುವಟಿಕೆಗಳು | ಷರಾ |
|---|---|---|---|---|---|---|---|---|
| 5. | ಕುರಣೆ ಟೆಕ್ಸ್ ಟೈಲ್ ಪಾರ್ಕ್ ಲಿ., - ಬೆಳಗಾವಿ ಜಿಲ್ಲೆ | ರಾಜ್ಯ ಸರ್ಕಾರದ ಅನುಮೋದಿತ ನೂತನ ಜವಳಿ ನೀತಿ 2013-18 | 18.16 | 02 | 39.71 | 135 | ವೀವಿಂಗ್ ಮತ್ತು ಸಿದ್ಧಉಡುಪು | ಪ್ರಗತಿಯಲ್ಲಿದೆ. |
| 6. | ದಾವಣಗೆರೆ ಟೆಕ್ಸ್ ಟೈಲ್ ಪಾರ್ಕ್, ದಾವಣಗೆರೆ ಜಿಲ್ಲೆ | ಕೆ.ಐ.ಎ.ಡಿ.ಬಿ ಅಭಿವೃದ್ಧಿಪಡಿಸಲಾದ | 59.00 | 44 | 39.13 | 1077 | ವಾರ್ಪಿಂಗ್, ವೀವಿಂಗ್, ಸಿದ್ಧ ಉಡುಪು , ತಾಂತ್ರಿಕ ಜವಳಿ | ಕಾರ್ಯ ನಿರ್ವಹಿಸುತ್ತಿದೆ. |
| 7. | ಬೋರಗಾಂವ್ ಟೆಕ್ಸ್‌ಟೈಲ್ ಪಾರ್ಕ್, ಬೆಳಗಾವಿ ಜಿಲ್ಲೆ | ಕೆ.ಎಸ್.ಎಸ್.ಐ.ಡಿ.ಸಿ ಅಭಿವೃದ್ಧಿಪಡಿಸಲಾದ | 75.00 | 15 | 82.34 | 400 | ಹೈಟೆಕ್ ವೀವಿಂಗ್ & ಸಿದ್ಧ ಉಡುಪು | ಕಾರ್ಯ ನಿರ್ವಹಿಸುತ್ತಿದೆ. |
| 8. | ಬಳ್ಳಾರಿ ಟೆಕ್ಸ್ ಟೈಲ್ ಪಾರ್ಕ್, (ಮುಂಡರಗಿ), ಬಳ್ಳಾರಿ ಜಿಲ್ಲೆ | ಕೆ.ಐ.ಎ.ಡಿ.ಬಿ ಅಭಿವೃದ್ಧಿಪಡಿಸಲಾದ | 64.26 | 67 | 46.39 | 1550 | ಜೀನ್ಸ್ ವಾಷಿಂಗ್, ಸಿದ್ಧ ಉಡುಪು, ಜಿನ್ನಿಂಗ್ & ಪ್ರೆಸ್ಸಿಂಗ್ ಇತ್ಯಾದಿ | ಕಾರ್ಯ ನಿರ್ವಹಿಸುತ್ತಿದೆ. |
| 9. | ಆದಿತ್ಯ ಟೆಕ್ಸ್‌ಟೈಲ್ ಪಾರ್ಕ್ ಪ್ರೈ ಲಿ., ಬಳ್ಳಾರಿ ಜಿಲ್ಲೆ | ನೂತನ ಜವಳಿ ಹಾಗೂ ಸಿದ್ಧ ಉಡುಪು ನೀತಿ 2019-24 | 16.88 | - | - | - | ಸರ್ಕಾರದ ಆದೇಶ ಸಂಖ್ಯೆ: CI 03 JAKY 2025, ದಿನಾಂಕ:08.07.2025 ರಲ್ಲಿ ಪಾರ್ಕ್ ಅನುಮೋದನೆಯಾಗಿದ್ದು, ಪಾರ್ಕ್‌ನ ಮೂಲಭೂತ ಸೌಕರ್ಯ ಕಾಮಗಾರಿ ಪ್ರಗತಿಯಲ್ಲಿರುತ್ತದೆ. | |

...3

## ಅನುಬಂಧ- 1 B

**ಸರ್ಕಾರದ ಒಡೆತನದ ಜಮೀನಿನಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವ (ಪಿಪಿಪಿ) ಮಾದರಿಯಲ್ಲಿ ಸ್ಥಾಪಿಸಲಾಗುತ್ತಿರುವ ಜವಳಿ ಪಾರ್ಕ್‌ಗಳ ವಿವರ**

| ಕ್ರ.ಸಂ. | ಜಿಲ್ಲೆ | ಪಾರ್ಕ್ ಹೆಸರು | ಜಾಗದ ವಿಸ್ತೀರ್ಣ | ಇತ್ತೀಚಿನ ಮಾಹಿತಿ |
|---|---|---|---|---|
| 1. | ಕಲಬುರಗಿ | PM-MITRA ಪಾರ್ಕ್ ಕರ್ನಾಟಕ ಲಿ., | 1000 ಎಕರೆ | ಕೇಂದ್ರ ಹಾಗೂ ರಾಜ್ಯ ಸಹಯೋಗದಲ್ಲಿ ಅಭಿವೃದ್ಧಿ ಪಡಿಸಲಾಗುತ್ತಿದ್ದು, ಮಾಸ್ಟರ್ ಡೆವಲಪರ್ ನೇಮಕಾತಿಗಾಗಿ ಕ್ರಮವಹಿಸಲಾಗುತ್ತಿದೆ. |
| 2 | ಉಡುಪಿ | ಕಾರ್ಕಳ ಜವಳಿ ಪಾರ್ಕ್ | 15 ಎಕರೆ | ಮಾಸ್ಟರ್ ಡೆವಲಪರ್ ನೇಮಕಾತಿಗಾಗಿ 2 ನೇ ಟೆಂಡರ್ ಕರೆಯಲಾಗಿದೆ. |
| 3 | ರಾಯಚೂರು | ರಾಯಚೂರು ಜವಳಿ ಪಾರ್ಕ್ | 15 ಎಕರೆ | **ಸರ್ಕಾರದ ಆದೇಶ ದಿನಾಂಕ**:04.08.2025 ರಂದು **ಹೊರಡಿಸಲಾಗಿದ್ದು**, ಮಾಸ್ಟರ್ ಡೆವಲಪರ್ ನೇಮಕಾತಿಗಾಗಿ ಕ್ರಮವಹಿಸಲಾಗುತ್ತಿದೆ. |
| 4 | ಹಾವೇರಿ | ರಾಣೆಬೆನ್ನೂರು ಜವಳಿ ಪಾರ್ಕ್ | 16 ಎಕರೆ 8 ಗುಂಟೆ | ವ್ಯವಹಾರಿಕ ಸಲಹೆಗಾರರ (Transaction Advisor)ನ್ನು ನೇಮಿಸಲಾಗಿದ್ದು, ಪಾರ್ಕ್ ನಿರ್ಮಾಣಕ್ಕೆ ಸಂಬಂಧಿಸಿದಂತೆ ಕ್ರಮವಹಿಸಲಾಗುತ್ತಿದೆ. |
| 5 | ಚಿಕ್ಕಮಗಳೂರು | ಚಿಕ್ಕಮಗಳೂರು ಜವಳಿ ಪಾರ್ಕ್ (ಚೀಲನಹಳ್ಳಿ) | 25 ಎಕರೆ | ವ್ಯವಹಾರಿಕ ಸಲಹೆಗಾರರ (Transaction Advisor) ನೇಮಕಾತಿಗೆ ಟೆಂಡರ್ ಕರೆಯಲಾಗಿದೆ. |
| 6 | ಚಿಕ್ಕಮಗಳೂರು | ಚಿಕ್ಕಮಗಳೂರು ಜವಳಿ ಪಾರ್ಕ್ (ಹಿರೇಗೌಜ) | 15 ಎಕರೆ | ವ್ಯವಹಾರಿಕ ಸಲಹೆಗಾರರ (Transaction Advisor) ನೇಮಕಾತಿಗೆ ಟೆಂಡರ್ ಕರೆಯಲಾಗಿದೆ. |
| 7 | ಬಾಗಲಕೋಟೆ | ಗುಳೇದಗುಡ್ಡ ಜವಳಿ ಪಾರ್ಕ್ | 15 ಎಕರೆ | ವ್ಯವಹಾರಿಕ ಸಲಹೆಗಾರರ (Transaction Advisor) ನೇಮಕಾತಿಗೆ ಟೆಂಡರ್ ಕರೆಯಲಾಗಿದೆ. |

ಅಪರ ನಿರ್ದೇಶಕರು (ಜವಳಿ ನೀತಿ),
ಕೈಮಗ್ಗ ಮತ್ತು ಜವಳಿ

## ಅನುಬಂಧ-2

| ರಾಷ್ಟ್ರೀಯ ಕೈಮಗ್ಗ ಮೇಳ (NHE), ರಾಜ್ಯ ಮಟ್ಟದ ಕೈಮಗ್ಗ ಮೇಳ (SHE) ಹಾಗೂ ಜಿಲ್ಲಾ ಮಟ್ಟದ ಕೈಮಗ್ಗ ಮೇಳ (DLE) ಗಳನ್ನು ಆಯೋಜಿಸಿ ಮಾರಾಟ ಸೌಲಭ್ಯ ಕಲ್ಪಿಸಲಾದ ವಿವರ | | | | | | | |
|---|---|---|---|---|---|---|---|
| Sl No | Year | Districts | Name of the Events | Venue | Date of the events | Amount Sanctioned for the events (Rs.In Lakhs) | No.of Beneficiary's |
| 1 | 2022-23 | Bangalore | NHE | H M.T. Ground, Jalahalli, Bangalore | 25.01 2023 to 10.02.2023 | 45.00 | 2815 |
| | | Davanagere | SHE | Moti Veeramma Chennbasappa Kalyana Mantapa, A.V.K.Colloge Road, Davangere | 03 10.2022 to 15.10.2022 | 27 398 | 2600 |
| | | Mysore | SHE | JSS Urban Hatt, Hebbala Mysore | 08 12 2022 to 25.12.2022 | 27.398 | 1200 |
| | | Dharwad | SHE | Sindhoora Hall Opp .K.c. Park, Dharwae | 02.01.2023 to 15.01.2023 | 27.398 | 13551 |
| | | Chikmangalur | DHE | Ambedkar Bhavan, Market Road, Chikkamangaluru | 19.10.2022 to 23.10.2022 | 6.00 | 2500 |
| | | Haasan | DHE | Saptpadi Sowdamini Hall, Sri Seeta Ramamnjaneya Temle, Park Road, Haasan | 28 12 2022 to 01.01.2022 | 6.00 | 5746 |
| 2 | 2023-24 | Bangalore | NHE | KASSIA Bhavan, Vijaya Nagar, Bangalore | 11.01.2024 to 24.01.2024 | 45.00 | 6121 |
| | | Bellary | SHE | Gandhi Bhavana, Royal Circle, Bellary | 02.01.2024 to 15.01.2024 | 30.00 | 1286 |
| | | Mysore | SHE | JSS Urban Hatt, Hebbala Mysore | 01 09 2023 to 15 09.2023 | 30.00 | 3500 |
| 3 | 2024-25 | Bangalore | NHE | H.M.T. Ground, Jalahalli, Bangalore | 05-01-2025 to 19-01-2025 | 45.00 | 2500 |
| | | Mysore (JSS) | SHE | JSS Urban Hatt, Hebbala Mysore | 02-08-2024 to 15-08-2024 | 29 25 | 3000 |
| | Total | | | | | 318.44 | 44819 |

ಅಪರ ನಿರ್ದೇಶಕರು,
ಕೈಮಗ್ಗ ಮತ್ತು ಜವಳಿ



File No. C I/173/JAKE/2025-TEXTILE-C&I SEC (Computer No. 1862049)
Generated from eOffice by Shashidhar N, C&I-DDTex(SN), DEPUTY DIRECTOR, COMMERCE AND INDUSTRIES SECRETARIAT on 08/08/2025 01:10 PM